Manasagangothri@gmail.com

# ಮಾನಸ ಗಂಗೋತ್ರಿ

ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

**33 ದೇಶಗಳ 110 ಪತ್ರಿಕೆಗಳು** ಪುಟ–3



**ಮಹಾರಾಜ ಕಾಲೇಜು ತಂಡಕ್ಕೆ ಗೆಲುವು** ಪುಟ–4



ಪುಟ–4



## ಅಂತರ ಕಾಲೇಜು ಪುರುಷರ ಕ್ರೀಡಾಕೂಟ

### ಚದುರಂಗದಲ್ಲಿ ಮಹಾರಾಜ ಕಾಲೇಜು ಚಾಂಪಿಯನ್



ಮೈಸೂರು, ಮಹಾರಾಜ ಕಾಲೇಜು ತಂಡ ಚದುರಂಗದಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿದೆ. ಮೈಸೂರಿನ ಮಹಾರಾಜ ಕಾಲೇಜು ವತಿಯಿಂದ ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆಯುತ್ತಿರುವ ಮೈಸೂರು ವಿಶ್ವ ವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಕ್ರೀಡಾ ಕೂಟದಲ್ಲಿಮಂಡ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಂಡವನ್ನು ಮಣಿಸಿ ಈ ಸಾಧನೆ ಮಾಡಿದೆ. ಹಾಸನದ ಸರ್ಕಾರಿ ವಿಜ್ಞಾನ ಕಾಲೇಜು ತೃತೀಯ ಸ್ಥಾನಕ್ಕೆ ಪಾತ್ರವಾಗಿದೆ.

ಬಾಲ್ ಬ್ಯಾಡ್ಮಿಂಟನ್, ಕಬಡ್ಡಿ, ಫುಟ್‌ಬಾಲ್, ಹ್ಯಾಂಡ್‌ಬಾಲ್, ಖೋಖೋ ಆಟಗಳ ಅಂತಿಮ ಪಂದ್ಯಗಳು ಶನಿವಾರ ನಡೆಯಲಿವೆ.

# ಏಕತೆ ಸಾಧಿಸಿರುವುದು ಬಹುಬಗೆಯ ಸಂಸ್ಕೃತಿಗಳ ಕೂಡುವಿಕೆಯಿಂದ

ಮೈಸೂರು,– ಭಾರತ ವೈವಿಧ್ಯತೆಯಲ್ಲಿ ಏಕತೆ ಸಾಧಿಸಿರುವುದು ಬಹುಬಗೆಯ ಸಂಸ್ಕೃತಿಗಳ ಕೂಡುವಿಕೆಯಿಂದ. ಜನ ಸಾಮಾನ್ಯರ ಬದುಕನ್ನು ಬಿಂಬಿಸುವ, ಕೂಡಿಬಾಳುವುದನ್ನು ಕಲಿಸುವ ಹಾಗೂ ಮಾನವೀಯ ಸ್ಪರ್ಶದಿಂದ ಕೂಡಿರುವ ಭಾರತೀಯ ಕಲೆಗಳ ಪ್ರದರ್ಶನದ ಮೂಲಕ ರಾಷ್ಟ್ರೀಯ ಯುವ ಜನೋತ್ಸವಕ್ಕೆ ಇತ್ತೀಚೆಗೆ ಚಾಲನೆ ನೀಡಲಾಯಿತು.

ವಿವಿಧ ಸಂಸ್ಕೃತಿಗಳನ್ನು ಪರಿಚಯಿಸು ಹಾಗೂ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗೆ ಸೂಕ್ತ ವೇದಿಕೆ ನೀಡುವ ಸಲುವಾಗಿ ಭಾರತೀಯವಿಶ್ವವಿದ್ಯಾನಿಲಯಗಳ ಸಂಘದ ಸಹಯೋಗದೊಂದಿಗೆ ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿರುವ 31ನೆಯ ಅಂತರ ವಿಶ್ವವಿದ್ಯಾನಿಲಯಗಳ ರಾಷ್ಟ್ರೀಯ ಯುವ ಜನೋತ್ಸವ 'ಯುವ ಶತಸಂಭ್ರಮ–2016'ರಲ್ಲಿ ದೇಶದವಿವಿಧ

ನಗರದಲ್ಲಿ ವಿಶ್ವವಿದ್ಯಾಲಯದಲ್ಲಿ ಆರಂಭವಾಗಿರುವ 5 ದಿನಗಳ ರಾಷ್ಟ್ರೀಯ ಯುವ ಜನೋತ್ಸವದಲ್ಲಿ 71 ವಿಶ್ವವಿದ್ಯಾನಿಲಯಗಳ 1200 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.



ಚಿತ್ರದಲ್ಲಿ ಚಲನಚಿತ್ರ ನಿರ್ದ್ರೇಶಕ ನಾಗತಿಹಳ್ಳಿ ಚಂದ್ರಶೇಖರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರೊ. ಕೆ ಎಸ್. ರಂಗಪ್ಪ, ಪ್ರೊ ಸಿ. ಬಸವರಾಜು ಇತರರನ್ನು ಕಾಣಬಹುದು,

ಅವರು ಸಂಗೀತ, ನೃತ್ಯ, ಸಾಹಿತ್ಯ, ರಂಗಭೂಮಿ ಸೇರಿದಂತೆ 25 ಕಲೆಗಳನ್ನ ಪ್ರದರ್ಶನ ಮಾಡಿದರು. ಸಭಾ ಕಾರ್ಯಕ್ರಮಕ್ಕೂ ಮುನ್ನ ಕ್ರಾಫರ್ಡ್ ಭವನದಿಂದ ಆಯೋಜಿಸಿದ್ದ ಮೆರವಣಿಗೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುಂದರೇಶ್ ಮತ್ತು ತಂಡ ಪೂಜಾ ಕುಣಿತ, ರಮ್ಯ ತಂಡ ಡೊಳ್ಳು ಕುಣಿತ ನೆರೆದಿದ್ದವರ ಮನ ತಣಿಸಿತು. ಅಸ್ಸಾಂ, ಪಂಜಾಬ್, ಮುಂಬೈ ಸೇರಿದಂತೆ 60ಕ್ಕೂ ಹೆಚ್ಚು ವಿವಿಗಳ ವಿದ್ಯಾರ್ಥಿಗಳು ತಮ್ಮ ಕಲೆಗಳನ್ನು ಪ್ರದರ್ಶಿಸಿ ಏಕತೆಯನ್ನು ಸಾರಿದರು. ವಿದ್ಯಾರ್ಥಿಗಳ ಉಡುಗೆ ತೊಡುಗೆ, ನೃತ್ಯಗಳು ವಿಶೇಷ ಗಮನ ಸೆಳೆದವು. ಮೆರವಣಿಗೆಗೆ ನಗರ ಪೊಲೀಸ್‌ಆಯುಕ್ತ ಬಿ.ದಯಾನಂದ್ ಚಾಲನೆ ನೀಡಿದರು.

ಮೈಸೂರು ವಿವಿಯ ಬಯಲು ರಂಗಮಂದಿರ, ಸೆನೆಟ್‌ಭವನದ ಸಭಾಂಗಣದ ಮೊದಲ ಮಹಡಿ, ಬಿಎಂಶ್ರೀ ಸಭಾಂಗಣ, ಮಾನವಿಕ ಸಭಾಂಗಣ, ಇಎಂಎಂಆರ್‌ಸಿ ಸಭಾಂಗಣ, ಲಲಿತಕಲಾ ಕಾಲೇಜು ಸಭಾಂಗಣಗಳಲ್ಲಿ ಸ್ಪರ್ಧೆಗಳು ನಡೆದವು.ವಿವಿಧ ವಿಶ್ವವಿದ್ಯಾನಿಲಯಗಳಿಂದ ಆಗಮಿಸಿರುವ ವಿದ್ಯಾರ್ಥಿ ಗಳಿಗೆ ನಂಜರಾಜ ಬಹದ್ದೂರ್ ಛತ್ರ, ವಿಲೇಜ್ ಹಾಸ್ಟೆಲ್, ಆರ್‌ಐಇ ಮುಂತಾದ ಸ್ಥಳಗಳಲ್ಲಿ ಕಲಾವಿದರಿಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರಾಷ್ಟ್ರೀಯ ಯುವ ಜನೋತ್ಸ ವವನ್ನು ಚಲನಚಿತ್ರ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗವಹಿಸಿದ್ದರು. ಮೈಸೂರು ವಿವಿ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಗೌರವಾನ್ವಿತ ಅತಿಥಿಗಳಾಗಿ ದಿಲ್ಲಿಯ ಎಐಯು ಕಾರ್ಯದರ್ಶಿ ಪ್ರೊ.ಫರ್‌ಖ್ವಾನ್ ಖ್ವಾಮರ್, ಜಂಟಿ ಕಾರ್ಯದರ್ಶಿ ಸ್ಯಾಮ್‌ಸನ್ ಡೇವಿಡ್, ಮೈಸೂರು ವಿವಿ ಕುಲಸಚಿವ ಪ್ರೊ.ಸಿ.ಬಸವರಾಜು, ಮೈಸೂರು ವಿವಿ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ನಿರ್ದೇಶಕ ಡಾ.ಎಂ.ರುದ್ರಯ್ಯ, ಸಂಘಟಕ ಪ್ರೊ.ಬಾಲಸುಬ್ರಮಣ್ಯಂ ಮುಂತಾದವರು ಸಮಾರಂಭದಲ್ಲಿ ಹಾಜರಿದ್ದರು.

# ಶಿಕ್ಷಣ ಸಂಸ್ಥೆಗಳಲ್ಲಿ ಡಿಜಿಟಿಲ್ ಸೌಲಭ್ಯ ಮುಖ್ಯ

ಮೈಸೂರು,ಪ್ರಸ್ತುತ ಕಾಲಘಟ್ಟದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಡಿಜಿಟಿಲ್ ಸೌಲಭ್ಯ ಮುಖ್ಯ, ಇದರಿಂದ ಮಾತ್ರ ನಿರೀಕ್ಷಿತ ಪ್ರಗತಿ ಸಾಧ್ಯ ಎಂದು ಬೆಂಗಳೂರಿನ ಪಿಇಎಸ್ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ಎಂ.ಆರ್.ದೊರೆಸ್ವಾಮಿ ತಿಳಿಸಿದರು.

ಮೈಸೂರು ವಿವಿಯ ಗ್ರಂಥಾಲಯ ವಿಭಾಗ, ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಗ್ರಂಥಾಲಯ ವೃತ್ತಪರರ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಗ್ರಂಥಾಲಯ ಮತ್ತು ಮಾಹಿತಿ ಸೇವೆ ಎಲ್ಲರಿಗೂ ಡಿಜಿಟಲ್ ಯುಗದಲ್ಲಿಸೇವೆ ಲಭ್ಯವಾಗದವರಿಗೆ ಸೇವೆ ಒದಗಿಸುವುದುವಿಷಯ



ಚಿತ್ರದಲ್ಲಿ ಬೆಂಗಳೂರಿನ ಪಿಇಎಸ್‌ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಂ. ಆರ್.ದೊರೆಸ್ವಾಮಿ. ರಾಜ್ಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ.ಸತೀಶ್ ಕುಮಾರ್ ಹೊಸಮನಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿರುವ ಎಲ್ಲ 6 ಲಕ್ಷ ಗ್ರಾಮಗಳಿಗೂ ಅಂತರ್ಜಾಲ ಸೇರಿದಂತೆ ಇತರ ಆಧುನಿಕತಂತ್ರಜ್ಞಾನದ ಸೌಲಭ್ಯಗಳನ್ನು ಒದಗಿಸದಿದ್ದರೆ ಅಭಿವೃದ್ಧಿ ಕನಸಾಗುತ್ತದೆ ಎಂದು ಹೇಳಿದರು, ಭಾರತದಲ್ಲಿ ಜಿಡಿಪಿಯ ಶೇ.2.5 ಹಣವನ್ನು ಮಾತ್ರ ಶೈಕ್ಷಣಿಕ ಕ್ಷೇತ್ರಕ್ಕೆ ಬಳಕೆ ಮಾಡಲಾಗುತ್ತಿದೆ. ಈ ಪ್ರಮಾಣ ಹೆಚ್ಚಬೇಕಿದೆ 'ಎಂದು ಅವರು ಅಭಿಪ್ರಾಯಪಟ್ಟರು.

ರಾಜ್ಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ.ಸತೀಶ್‌ಕುಮಾರ್ ಹೊಸಮನಿ ಮಾತನಾಡಿದರು. ಮಂಗಳೂರು ವಿವಿ ಕುಲಸಚಿವ ಪ್ರೊ.ಟಿ.ಡಿ.ಕೆಂಪರಾಜು, ಮೈಸೂರು ವಿವಿ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಡೀನ್ ಪ್ರೊ. ಎ. ಬಾಲಸುಬ್ರಮಣ್ಯ, ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಗ್ರಂಥಾಲಯ ವೃತ್ತಿಪರರಸಂಘದ ಪದಾಧಿಕಾರಿಗಳಾದ ಡಾ.ಗಣಪತಿ ಶಿಂಧೆ, ಸಿ.ಪಿ.ರಾಮಶೇಷು, ಡಾ.ರಾಧಾಕೃಷ್ಣ, ಮೈಸೂರು ವಿವಿ ಗ್ರಂಥಾಲಯ ವಿಭಾಗದ ಮುಖ್ಯಸ್ಥ ಪ್ರೊ.ಎಂ. ಚಂದ್ರಶೇಖರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



**ಹಿತನುಡಿ**

ಪ್ರೀತಿ ಇಲ್ಲದ ಮೇಲೆ ಮಾತಿಗೆ ಮಾತು ಕೂಡಿತು ಹೇಗೆ?
ಮಾತಿಗೆ ಅರ್ಥ ಹುಟ್ಟಿತು ಹೇಗೆ?

– ಜಿ. ಎಸ್. ಶಿವರುದ್ರಪ್ಪ

**ಸಂಪಾದಕರ ಮಂಡಳಿ**

ಪ್ರಧಾನ ಸಂಪಾದಕರು ಮತ್ತು : ಡಾ. ಸಿ.ಕೆ ಪುಟ್ಟಸ್ವಾಮಿ

ವಿದ್ಯಾರ್ಥಿ ಸಂಪಾದಕರು : ಅಕ್ಷಯ್. ಕೆ
ಚಂದ್ರಶೇಖರ್ .ಬಿ
ಬೀಮಣ್ಣ,
ಚೈತ್ರಾ.ಎಚ್.ಎಸ್

ಪುಟವಿನ್ಯಾಸ ಮಲ್ಲಿಕಾರ್ಜುನ್

# ಸಂಪಾದಕೀಯ

## ಬೆಂಗಳೂರಿನಂತಾಗದಿರಲಿ ಮೈಸೂರು

ಕಳೆದ ಬಾರಿ ದೇಶದಲ್ಲೇ ಸ್ವಚ್ಛ ನಗರ ಎಂದು ಖ್ಯಾತಿಯಾಗಿದ್ದ ಮೈಸೂರು ಮತ್ತೆ ಎರಡನೇ ಬಾರಿಗೆ ದೇಶದ ಸ್ವಚ್ಛ ನಗರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಳೆದ ಸಲ ಸ್ವಚ್ಛ ನಗರಗಳ ಪಟ್ಟಿಯಲ್ಲಿ 11ನೇ ಸ್ಥಾನ ಪಡೆದಿದ್ದ ಬೆಂಗಳೂರು ಈ ಬಾರಿ 38ನೇ ಸ್ಥಾನಕ್ಕೆ ಇಳಿದಿದೆ. ಮೈಸೂರಿನ ಈ ಯಶಸ್ಸು ಮತ್ತು ಬೇಂಗಳೂರಿನ ಈ ದುಸ್ಥಿತಿಯ ಕಥೆಯನ್ನು ಭಾರತದ ಒಟ್ಟಾರೆಯ ನಗರೀಕರಣ ಪ್ರಕ್ರೀಯೆಯ ಸ್ವರೂಪದ ಜೊತೆಗೆ ಅರ್ಥ ಮಾಡಿಕೊಳ್ಳಬೇಕಾಗಿದೆ. ದೇಶದಲ್ಲಿ ನಗರೀಕರಣ ಪ್ರಕ್ರಿಯೆಗೆ ದೊರೆತಿರುವ ವೇಗವನ್ನು ವಿಶ್ವದ ಇನ್ಯಾವುದೆ ದೇಶದೊಂದಿಗೆ ಹೋಲಿಸಲು ಸಾಧ್ಯವಿಲ್ಲ.

ಮೈಸೂರಿನ ಈ ಪ್ರಖ್ಯಾತಿಗೆ ಹೆಮ್ಮೆ ಪಡುವುದಾದರೆ, ಬೆಂಗಳೂರಿನ ದುಸ್ಥಿತಿಗೆ ವ್ಯಥೆ ಪಡಬೇಕಾಗಿದೆ. ಮುಂದೆ ಇನ್ನು ಅದೋಗತಿಗೆ ಒಳಗಾದರೆ ಅಚ್ಚರಿ ಪಡಬೇಕಾಗಿಲ್ಲ. ಆದರೆ ಮುಂದೊಂದು ದಿನ ಮೈಸೂರಿಗು ಬೆಂಗಳೂರಿನಂತ ಪರಿಸ್ಥಿತಿ ಬರಬಹುದು. ಮೈಸೂರಿಗರಿಗೆ ತಿಳಿದಿರುವ ಹಾಗೆ ಮೈಸೂರಿನ ಸ್ವಚ್ಛತೆ ಬರಿ ನಗರದ ಭಾಗಕ್ಕೆ ಸೀಮಿತವಾಗಿದೆ ಎನ್ನಬಹುದು, ಮೈಸೂರಿನ ಎನ್ಆರ್ ಮೋಹಲ್ಲಾ, ಮಂಡಿ ಮೊಹಲ್ಲಾಗಳ ಕಡೆ ನೋಡಿದಾಗ ಮೈಸೂರಿನ ಸ್ವಚ್ಛತೆ ಬಗ್ಗೆ ಅರಿವಾಗುತ್ತದೆ. ಯಾವ ಮಾನದಂಡದ ಆಧಾರದ ಮೇಲೆ ಮೈಸೂರಿಗೆ ಸ್ವಚ್ಛ ನಗರಿ ಹಣೆ ಪಟ್ಟಿ ನೀಡಿದರೊ, ಇದರಿಂದ

ನಗರೀಕರಣದಿಂದಾಗಿ ನಗರಗಳು ಬಹು ಬೇಗ ಬೆಳೆಯುತ್ತಿದ್ದಂತೆ, ಇಲ್ಲಿ ಸಮಸ್ಯೆಗಳು ಹೆಚ್ಚು ಉಂಟಾಗುತ್ತಿದೆ. ಐದು ವರ್ಷಗಳ ಹಿಂದೆ ಮೆಕಿನ್ಸಿ ಸಂಸ್ಥೆಯ ವರದಿ ಈ ವಿಷಯದ ಮೇಲೆ ಬೆಳಕು ಚೆಲ್ಲಿತು. ಕಳೆದ 40 ವರ್ಷಗಳ ಅವಧಿಯಲ್ಲಿ ಭಾರತ ನಗರದಲಿ (2008) ವಾಸಿಸುವವರ ಜನಸಂಖ್ಯೆ 23 ಕೋಟಿಯಷ್ಟಿತ್ತು. 2008ರ ನಂತರದಲ್ಲಿ ಈ ವೇಗ ಹೆಚ್ಚಾಗಿ 2011ರ ಜನಗಣತಿಯ ಪ್ರಕಾರ 37.7 ಗೇರಿದೆ. ಇದು 50 ಕೋಟಿಗೇರಲು ಒಂದು ದಶಕ ಬೇಕಾಗಿಲ್ಲ ಎಂದು ಮೆಕಿನ್ಸಿ ಹೇಳಿದೆ. ಈ ಅತಿಯಾದ ನಗರೀಕರಣದಿಂದ ಒತ್ತಡ ಬೀಳುತ್ತಿರುವುದು ಮಹಾನಗರಗಳ ಮೇಲೆ. ಇದಕ್ಕೆ ಸಾಕ್ಷಿಯಾಗಿ ಬೆಂಗಳೂರು ನಿಲ್ಲುತ್ತದೆ. ಇದು ಹೀಗೆ ಮುಂದುವರೆದರೆ ಮೈಸೂರಿನಂತ ಸ್ವಚ್ಛ ನಗರಗಳು ಕೊಳಕು ನಗರಗಳಾಗುವುದು ಕಂಡಿತ.

ಆದರೆ ಇದನ್ನು ಬಹು ಬೇಗ ಸುಧಾರಿಸುವ ಸಮಸ್ಯೆಯಲ್ಲ ಇದಕ್ಕೆ ಬಹಳ ಸಮಯಾವಕಾಶ ಬೇಕಾಗುತ್ತದೆ. ನಮ್ಮ ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯವೆ ಈ ಪರಿಸ್ಥಿತಿಗೆ ಕಾರಣ. ಇವರು ನಗರೀಕರಣ ವೇಗಕ್ಕೆ ಅನುಗುಣವಾಗಿ ಮೂಲಸೌಕರ್ಯವನ್ನು ಸುಧಾರಿಸುವ ಕೆಲಸ ಮಾಡಲಿಲ್ಲ, ಅದು ಅವರಿಗೆ ಬೇಕಾಗಿಯು ಇಲ್ಲಾ. ಅವರ ಈ ನಿರ್ಲಕ್ಷ್ಯವೆ ಇದಕ್ಕೆ ಕಾರಣ. ನಡೆದ ಎಲ್ಲಾ ಸುಧಾರಣಾ ಪ್ರಯತ್ನಗಳೆಲ್ಲವೂ ನಗರದ ಒಟ್ಟಾರೆ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿರಲಿಲ್ಲ. ಎಲ್ಲವೂ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವಾಗಿದೆ. ಇವುಗಳ ಪರಿಣಾಮ ಸರ್ಕಾರಕ್ಕೆ ಗೋಚರಿಸಿದ್ದು ಸಮಸ್ಯೆ ತೀವ್ರಗೊಂಡ ನಂತರ.

ಆದರೆ ಒಂದಂತು ಗಮನದಲ್ಲಿರಬೇಕು. ಬೆಂಗಳೂರು ಒಂದೇ ವರ್ಷದಲ್ಲಿ 27 ಸ್ಥಾನ ಕುಸಿದಿದೆ, ಅದರಂತೆ ಒಂದನೇ ಸ್ಥಾನದಲ್ಲಿರುವ ಮೈಸೂರಿಗೂ ಈ ಪರಿಸ್ಥಿತಿ ಬರಲಾರದು ಎನ್ನಲಾಗುವುದಿಲ್ಲ. ಆದರೆ ಈಗ ದೊರೆತಿರುವ ಹೆಗ್ಗಳಿಕೆಯನ್ನು ಶಾಶ್ವತವಾಗಿರಿಸುವ ಪ್ರಯತ್ನ ಮುಂದುವರಿಸಬೇಕು. ದಿನದಿಂದ ದಿನಕ್ಕೆ ಕೊಳಕ್ಕನ್ನು ಹೆಚ್ಚಿಸಿಕೊಳ್ಳುತ್ತಿರುವ ಬೆಂಗಳೂರು ಅಗತ್ಯ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಿಸಬೇಕು ಆಗ ಮಾತ್ರ ಸುಧಾರಿಸಲು ಸಾದ್ಯ.

# ಕಸಾಪ ನಿರ್ಲಕ್ಷಿತ ದಲಿತರು

2015 ಕ್ಕೆ ಶತಮಾನೋತ್ಸವ ಪೂರೈಸಿದ ಕಸಾಪವು ಕನ್ನಡ ನಾಡು ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷೆಯ ಉಳುವಿಗೆ ಶ್ರಮಿಸಲು ಕಟ್ಟಿರುವ ಸಂಸ್ಥೆಯಾಗಿದೆ. ಆದರೆ ಇದು ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದನ್ನು ಬಿಟ್ಟರೆ ಭಾಷೆಯ ವಿಚಾರದಲ್ಲಿ ಪ್ರಭುತ್ವದ ಮೇಲೆ ಒತ್ತಡ ತರುವ ಕಾರ್ಯಗಳನ್ನು ಮಾಡುವಲ್ಲಿ ಯಶಸ್ವಿಯಾಗಿಲ್ಲ. 1915 ರಲ್ಲಿ ರಾಜಾಶ್ರಯದಲ್ಲಿ ಪ್ರಾರಂಭವಾಗಿರುವುದೇ ಇದಕ್ಕೆ ಕಾರಣವಾಗಿರಬಹುದು. ಈ ಸಂಸ್ಥೆಯು ದಲಿತರನ್ನು ನಿರ್ಲಕ್ಷಿಸುವ ರಾಜ್ಯ ಗಾಂಭಿರ್ಯದ ನಡೆಯ ಮೂಲಕವೇ ಪರಿಚಿತವಾಗಿದೆ. ಇದಕ್ಕೆ ಇದರ ಸಾಂಸ್ಥಿಕ ರಚನೆಯ ಮುಖ್ಯ ಕಾರಣ, 1915 ರಿಂದ ಅಂದರೆ ಇದರ ಸ್ಥಾಪನೆಯಿಂದ ಇಲ್ಲಿಯುವರೆಗೂ ಒಬ್ಬ ದಲಿತನು ಸಂಸ್ಥೆಯ ಅಧ್ಯಕ್ಷರಾದ ಉದಾಹರಣೆ ಇಲ್ಲ. ಇತ್ತಿಚೆಗಂತೂ ಈ ಸಂಸ್ಥೆ ನಡೆಸುವ ಸಾಹಿತ್ಯ ಸಮ್ಮೇಳನಗಳು ಜಾತ್ರೆ ಸ್ವರೂಪ ಪಡೆದು ನೌಕರರಿಗೆ ರಜಾ ಮತ್ತು ಪ್ರವಾಸದ ಮಜಾವನ್ನು ನೀಡಲು ಮಾತ್ರ ಸೀಮಿತವಾಗುತ್ತವೆ ಎನ್ನುವುದು ವಿಷಾದನೀಯ. ಸಮ್ಮೇಳನಗಳಲ್ಲಿ ಅರ್ಥಪೂರ್ಣ ಚರ್ಚೆಗಳಾಗುತ್ತಿಲ್ಲ ಎನ್ನುವ ಕೊರಗು ಸಾಹಿತ್ಯ ಪ್ರಿಯರದ್ದಾಗಿದೆ. [illegible] ಹೊಸ್ತಿಲಲ್ಲಿರುವ ಕಸಾಪಕ್ಕೆ ಹಣಕಾಸು ಕ್ರೂಢೀಕರಿಸುವ ದೃಷ್ಟಿಯಿಂದ ಜಾರಿಗೆ ಬಂದ ಕನ್ನಡ ನಿಧಿಯೆಂಬುವ ವಿನೂತನ ಯೋಜನೆಯು ವಿಫಲವಾಗಿ ದೇಣಿಗೆ ಸಂಗ್ರಹವು ಕ್ಷೀಣಿಸುತ್ತಿದೆ. ಕಾವ,ಜಾಣ,ರತ್ನ ಪರೀಕ್ಷೆಗಳನ್ನು ನಡೆಸುವುದು ಕೂಡ ಸರಿಯಾಗಿ ಆಗುತ್ತಿಲ್ಲ. ಕನ್ನಡ ಭಾಷೆಯನ್ನು ವಿಶ್ವಮುಖಿಯಾಗಿಸುವಲ್ಲಿ ಕಸಾಪದ ಕೊಡುಗೆಯೇನು ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ.

ಹೆಚ್.ವ್ಹಿ . ನಂಜುಂಡಯ್ಯನವರಿಂದ ಪುಂಡಲೀಕ ಹಾಲಂಬಿರವರೆಗೆ ಮೇಲ್ಜಾತಿಯವರಿಗೆ ಈ ಸಂಸ್ಥೆಯ ಅಧ್ಯಕ್ಷ ಗಾದಿ ಸೀಮಿತವಾಗಿದೆ. ಸಂಸ್ಥೆಯ ಮೂಲ ಉದ್ದೇಶವು ಮರೆಯಾಗುತ್ತಿದೆ. ಸರಕಾರದ ಅನುದಾನದ ಕೊರತೆಯು ಈ ಸಂಸ್ಥೆಯನ್ನು ಕಾಡುತ್ತಿದೆ. ಅಜೀವ ದಲಿತ ಸದಸ್ಯರ ಸಂಖ್ಯೆ ತುಂಬಾ ಕಡಿಮೆ ಇದೆ ಎನ್ನುವುದು ಸತ್ಯ. ಆದರೆ ದಲಿತರಿಂದ ಶ್ರೀಮಂತವಾದ ಸಾಹಿತ್ಯಿಕ ಕೊಡುಗೆ ಕನ್ನಡ ಸಾಹಿತ್ಯಕ್ಕೆ ಇದ್ದರು ಸಹ ಇಂದಿಗೂ ದಲಿತರು ನಿರ್ಲಕ್ಷಕ್ಕೊಳಗಾಗುತ್ತಿದ್ದಾರೆ. ದಲಿತ ಸಾಹಿತ್ಯವನ್ನ ಸಾಹಿತ್ಯ ಪ್ರಕಾರವೆಂದು ಒಪ್ಪಿಕೊಳ್ಳಲು ವಿಮರ್ಶಿತ ಮನಸ್ಸುಗಳು ಹಿಂದೇಟು ಹಾಕುತ್ತಿವೆ. ದಲಿತ ಸಾಹಿತ್ಯವು ಪ್ರತಿಭಟನೆಯ ಅಸ್ತ್ರವೇ ಆಗಿರಬಹುದು ಆದರೆ ಅದಕ್ಕೆ ತನ್ನದೆ ಆದ ಸಾಹಿತ್ಯಕ ಚಹರೆ ಇದೆ. ಬಲಪಂಥೀಯ ವಿಮರ್ಶಕರಿಂದ

ಟೀಕೆಗೆ ಗುರಿಯಾದ ಮಾತ್ರಕ್ಕೆ ಅದು ಸಾಹಿತ್ಯವೆ ಅಲ್ಲ ಎನ್ನುವುದು ಎಷ್ಟು ಸರಿ ? 81 ನೇ ಸಾಹಿತ್ಯ ಸಮ್ಮೇಳನಕ್ಕೆ ದೇವನೂರು ಮಹಾದೇವರನ್ನ ಅಧ್ಯಕ್ಷರನ್ನಾಗಿ ಮಾಡಿದ ಕ್ರಮ ಸ್ವಾಗತಾರ್ಹ. ಆದರೆ ಅವರು ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಮಾಧ್ಯಮದ ಕಡ್ಡಾಯಕ್ಕೆ ಆಗ್ರಹಿಸಿ ಅಧ್ಯಕ್ಷತೆಯನ್ನ ನಿರಾಕರಿಸಿದಾಗ ದಲಿತ ಕವಿ ಸಿದ್ದಲಿಂಗಯ್ಯನವರನ್ನ ಅಧ್ಯಕ್ಷರನ್ನಾಗಿ ಮಾಡಿದ್ದು ಕೂಡಾ ಸ್ವಾಗತಾರ್ಹ. ಆದರೆ ದೇವನೂರರ ಚಿಂತನೆಗಳಿಗೆ ಸಂಬಂಧಿಸಿದಂತೆ ಕಸಾಪವು ಪ್ರಭುತ್ವದ ಮೇಲೆ ಎಷ್ಟು ಒತ್ತಡ ಹೇರಿದೆ ಎಂಬುವದಕ್ಕೆ ಪುಂಡಲೀಕ ಹಾಲಂಬಿಯುವರು ಉತ್ತರಿಸಬೇಕಿದೆ.

ಸಮ್ಮೇಳನಗಳಲ್ಲಿ ಕೈಗೊಂಡ ಘೋಷಣೆಗಳು ಎಷ್ಟು ಅನುಷ್ಠಾನಗೊಂಡಿವೆ ಎಂಬುವುದನ್ನ ಕಸಾಪದ ಅಧ್ಯಕ್ಷರು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಚುನಾವಣೆ ಸಂಧರ್ಭದಲ್ಲಿ ರಾಜಕಾರಣಿಗಳಂತೆ ವರ್ತಿಸುವ ಇವರು ನಂತರ ಎಲ್ಲವನ್ನ ರಾಜಕಾರಣಿಗಳಿಂದಲೆ ಕಲಿತಂತಿದೆ. ಇಂದು ಮತ್ತೊಮ್ಮೆ ಕಸಾಪ ಚುನಾವಣೆ ನಮ್ಮನ್ನು ಎದುರುಗೊಂಡಿದೆ. ದಲಿತ ಅಜೀವ ಸದಸ್ಯರುಗಳು ವಿಚಾರ ಮಾಡಬೇಕಾದ ಸಮಯವಿದು. ಕನ್ನಡಕ್ಕೆ ಅದರಲ್ಲೂ ದಲಿತ ಪರ ಕಾರ್ಯಕ್ರಮಗಳು ಕೆಲಸಗಳು ಕಸಾಪದಿಂದ ಎಷ್ಟಾಗುತ್ತಿವೆ ಎಂದು. ಈ ಸಂಸ್ಥೆಯು ಪ್ರಭುತ್ವದ ನೆರಳಿನಿಂದ ಹೊರ ಬರುವವರೆಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಸಾಮಾಜಿಕ ಸಮಾನತೆಗಾಗಿ ಆತೊರೆಯುತ್ತಿರುವ ದಲಿತರು ಇಲ್ಲಿಯೂ ದೀಪದ ಕೆಳಗಿನ ಕತ್ತಲೆಯಲ್ಲಿದ್ದಾರೆ. ಈ ಸಂಸ್ಥೆಯ ವಿರುದ್ಧ ಬುದ್ಧಿವಂತ ದಲಿತರು ಜನಾಂದೋಲನ ಮಾಡುವ ಅಗತ್ಯವಿದೆ.

– ಭೀಮಣ್ಣ ಮಾದೆ.

## ಓದುಗರ ಪತ್ರ

**ಕಂಪ್ಯೂಟರ್ ಲ್ಯಾಬ್ ಸಮಸ್ಯೆ ಪರಿಹರಿಸಿ.**


ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಇರುವ ಗಣಕಯಂತ್ರಾಲಯವು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ವಿದ್ಯಾರ್ಥಿಗಳಿಗೆ ಬಹುಮುಖ್ಯವಾದ ಗಣಕ ಯಂತ್ರಾಲಯವು, ಕೆಲವು ದಿನಗಳಿಂದ ತಾಂತ್ರಿಕ ತೊಂದರೆಗಳಿಂದ ಕೆಟ್ಟು ನಿಂತಿವೆ. ಈಗ ಸರಿ ಹೋಗಬಹುದು ಆಗ ಸರಿಹೋಗಬಹುದು ಎಂದು ಹೇಳುತ್ತಿದ್ದಾರೆಯೇ ಹೊರೆತು, ಅದರ ತೊಂದರೆ ಸರಿಪಡಿಸಲು ಮುಂದಾಗುತ್ತಿಲ್ಲ, ವಿದ್ಯಾರ್ಥಿಗಳಿಗೆ ಕಂಪ್ಯೂಟರ್‌ನ ಅವಶ್ಯಕತೆ ಬಹಳ ಮುಖ್ಯವಾದದ್ದು, ಆದ್ದರಿಂದ ಸಂಭಂಪಟ್ಟವರು ಸೂಕ್ತಕ್ರಮ ಕೈಗೊಂಡು ತಾಂತ್ರಿಕ ತೊಂದರೆ ಸರಿಪಡಿಸಬೇಕೆಂದು ವಿನಂತಿ. –

### ಏನೇನೊ ಇರಬೇಕು.

ನೋಡಲು ಕುತೂಹಲ ಕಣ್ಣಿರಬೇಕು,
ಓದಲು ಮನಸ್ಸಿರ ಬೇಕು,
ಮಾತಾಡಲು ಏನಾದರು ತಿಳಿದಿರಬೇಕು,
ಇವೆಲ್ಲ ಆಗಬೇಕಾದರೆ ತಲೆಲಿ ಮಿದುಳಿರಬೇಕು.
ಆ ಮಿದುಳಲ್ಲಿ ಒಂಚೂರು ಬುದ್ಧಿ ಇರಬೇಕು,
ಇವೆಲ್ಲ ಆಗಬೇಕಾದರೆ ನಾವು ಬದುಕಿರಬೇಕು.




### ಬೆರಗು...!



ಅವಳನ್ನು ನೋಡಿ ಆದೆ ಬೆರಗು!
ಎದೆಯಲ್ಲಿ ಮೂಡಿತು ಸಿಡಿಲು–ಗುಡುಗು!
ಆಗಿನಿಂದ ದಿನಾಲು ಅವಳದೆ ಕೊರಗು,
ನಾನು ಏನು ಹೇಳಲಿಲ್ಲ ಕೊನೆಗೂ
ಅವಳೆ ಬಂದು ಹೇಳಿದಳು ಕೊನೆಗು
ಹೇ ನನ್ನ ಹಿಂದೆ ಬರಬೇಡ ತೊಲಗೂ.....

–ಐರಾವತ ಅಕ್ಷಯ್

ಮಾನಸ ಗಂಗೋತ್ರಿ



# ಭಾರತದ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆ

"ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಆಳವಾಗಿ ಯೋಚನೆ ಮಾಡಿ ಅವರನ್ನು ಉನ್ನತ ಪ್ರಜೆಯನ್ನಾಗಿ ರೂಪಿಸುವ ಕರ್ತವ್ಯ ಶಿಕ್ಷಕರು, ಪೋಷಕರು ಹಾಗೂ ಸಮಾಜದ ಮೇಲೆ ಇದೆ. ಮಹಾತ್ಮಾ ಗಾಂಧೀಜಿಯವರು "ಮಗುವಿನ ಸರ್ವತೋಮುಖ ಬೆಳವಣಿಗೆಯೇ ಶಿಕ್ಷಣ" ಎಂದಿದ್ದಾರೆ. ಮನುಷ್ಯ "ಕತ್ತಲಿನಿಂದ ಬೆಳಕಿನೆಡೆಗೆ, ಅಜ್ಞಾನದಿಂದ ಜ್ಞಾನದ ಕಡೆಗೆ " ಹೋಗಬೇಕಾದರೆ ಒಳ್ಳೆಯ ಶಿಕ್ಷಣ ಬಹಳ ಮುಖ್ಯ. ಯಾವುದೆ ದೇಶದ ಅಭಿವೃದ್ಧಿಯ ಬುನಾದಿಯ ಶಿಕ್ಷಣ.ಶಿಕ್ಷಣವು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.ಆದ್ದರಿಂದ ಶಿಕ್ಷಣವನ್ನು ಪರಿಣಾಮಕಾರಿಯಾಗಿ ವ್ಯವಸ್ಥೆಗೊಳಿಸುವುದು ಬಹಳ ಪ್ರಮುಖವಾಗಿದೆ.

ಪುರಾತನ ಕಾಲದಲ್ಲಿ ' ಗುರುಕುಲ ' ಪದ್ಧತಿಯಲ್ಲಿ ಶಿಕ್ಷಣದ ಸ್ವರೂಪ ಕಂಡು ಬಂದು 'ಗುರು ಕೇಂದ್ರೀಕೃತ ' ಪದ್ಧತಿ ಬಳಕೆಯಲ್ಲಿತ್ತು. ಅಂದರೆ ಶಿಕ್ಷಕರು ಭೋದಿಸುವ ವಿಷಯಗಳನ್ನು ಮಾತ್ರ ವಿದ್ಯಾರ್ಥಿಗಳು ಕಲಿಯುತ್ತಿದ್ದರು.ಪುರಾತನ ವಿದ್ಯಾಭ್ಯಾಸ ಕೆಲವೇ ಮೇಲ್ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವನ್ನು ಇದಗಿಸುತಿತ್ತು.ಆ ಕಾಲದಲ್ಲಿ ವಿದ್ಯಾರ್ಥಿಗಳು ವೇದಗಳು, ಉಪನಿಷತ್ತುಗಳು ,ಧನುರ್ ವಿದ್ಯಾ ಕೌಶಲ್ಯಗಳು , ತತ್ವಶಾಸ್ತ್ರ ಮುಂತಾದ ಸೀಮಿತ ವಿಷಯಗಳನ್ನು ಒಳಗೊಂಡಿತ್ತು. ಕ್ರಮೇಣವಾಗಿ ರಾಜಪ್ರಭುತ್ವ ಬ್ರಿಟಿಷರ ಆಳ್ವಿಕೆಯಿಂದ ಶಿಕ್ಷಣದ ಸ್ವರೂಪ ಬದಲಾವಣೆಯನ್ನು ಅಮೂಲಾಗ್ರವಾಗಿ ಪಡೆದುಕೊಂಡಿತ್ತು.ಉದ್ದಾತ ಉದ್ದೇಶಗಳನ್ನು ಹೊಂದಿದ ಶಿಕ್ಷಣ ವ್ಯವಸ್ಥೆ ಪ್ರಮೇಣ ಸಡಿಲಗೊಳ್ಳುತ್ತಾ ಹೋಯಿತು.

ಭಾರತವು ಪ್ರಸ್ತುತ ಪ್ರಾಥಮಿಕ, ಪ್ರೌಢ, ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಯನ್ನು ಹೊಂದಿದೆ.ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯು ಉದ್ದೇಶಗಳ ಈಡೇರಿಕೆಗೆ ಬದಲಾಗಿ ಪುಸ್ತಕದ ಜ್ಞಾನಕ್ಕೆ ಸೀಮಿತವಾಗಿದೆ. ಕೇವಲ ಉದ್ಯೋಗ ಸಂಪಾದಿಸುವುದೆ ಶಿಕ್ಷಣದ ಮೂಲ ಧ್ಯೇಯವಾಗಿದೆ. ಪುರಾತನ ಕಾಲದಲ್ಲಿ ಶಿಕ್ಷಣವು ಮೇಲ್ವರ್ಗದವರಿಗಾಗಿದ್ದರೆ. ಪ್ರಸ್ತುತ ಶ್ರೀಮಂರಿಗೆ ಮಾತ್ರ ಸಾಧ್ಯವಾಗಿದೆ.

ಆದ್ದರಿಂದ ಭಾರತೀಯ ಶಿಕ್ಷಣ ವ್ಯವಸ್ಥೆಯು ಕೆಲವು ಬದಲಾವಣೆಯೊಂದಿಗೆ ಅಭಿವೃದ್ಧಿಯೆಡೆಗೆ ದೇಶವನ್ನು ಮುನ್ನಡೆಸುವ ಪ್ರಯತ್ನ ಮಾಡಬೇಕು. ಇದರೊಂದಿಗೆ ಸರ್ಕಾರದ ಜವಾಬ್ದಾರಿ ಹಾಗೂ ವಿದ್ಯಾರ್ಥಿಗಳ ಕರ್ತವ್ಯಗಳು ಒಂದು ನಾಣ್ಯದ ಎರಡು ಮುಖಗಳಂತೆ ವರ್ತಿಸಿದಾಗ ಮಾತ್ರ ವ್ಯವಸ್ಥೆ ಬದಲಾಗಿ ದೇಶದ ಅಭಿವೃದ್ಧಿಗೆ ಸಹಕಾರವಾಗುತ್ತದೆ. "ವಿದ್ಯೆಯಿಂದ ವಿನಯ , ವಿನಯದಿಂದ ವಿಧೇಯತೆ , ವಿಧೇಯತೆಯಿಂದ ವಿಶ್ವಾಸ ಮೂಡಿಸುವ ಶಿಕ್ಷಣವು ಮನುಷ್ಯನನ್ನು ಉತ್ತಮ ಪ್ರಜೆಯಾಗಿ ರೂಪಿಸಿ ದೇಶದ ಹಿತ ಹಾಗೂ ಗೌರವವನ್ನು ಕಾಪಾಡುತ್ತದೆ.

# ಅಸಹನೆ ಹುಟ್ಟುವುದು ಮತದಿಂದ ಧರ್ಮದಿಂದ ಅಲ್ಲ

–ಕೆ.ಎಸ್.ಭಗವಾನ್ ರವರ ಸಂದರ್ಶನ



ಕೆ.ಎಸ್ ಭಗವಾನ್ ರವರು ನಿವೃತ್ತ ಇಂಗ್ಲೀಷ್ ಪ್ರಾಧ್ಯಪಕರು (ಮಹಾರಾಜ ಕಾಲೇಜು). ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ಗಳಿಸಿದ್ದಾರೆ. ಷೇಕ್ಸಪೀಯರ್‌ನ ಹಲವಾರು ಇಂಗ್ಲೀಷ್ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ವೈಚಾರಿಕ ನೆಲೆಗಟ್ಟಿನ ಚಿಂತನೆಗೆ ಹೆಸರುವಾಸಿಯಾಗಿ ಸಹೃದಯರ ಮನಗೆದ್ದಿದ್ದಾರೆ.

**1)ಧರ್ಮಾಂಧರರ ಧಾರ್ಮಿಕ ಚಿಂತನೆಗಳೆ ಅಸಹಿಷ್ಣುತೆಗೆ ಕಾರಣವೆ?**

ಹೌದು, ಒಂದರ್ಥದಲ್ಲಿ ನಿಜ. ಎಲ್ಲಾ ಮತಗಳಲ್ಲಿ ನಾನು 'ಧರ್ಮ' ಎಂಬ ಶಬ್ಧವನ್ನು ಬಳಸುವುದಿಲ್ಲ 'ಮತ' ಎಂದು ಬಳಸುತೇನೆ. ಕಾರಣ ಮನ್ ಅನ್ನೊ ಧಾತುವಿನಿಂದ ಮತ ಬಂದಿದೆ. ತಮ್ಮ ಅನುಕೂಲಗಳ ದೃಷ್ಟಿಯಿಂದ ಸೃಷ್ಟಿಸಿಕೊಳ್ಳುವುದನ್ನೆಲ್ಲ ಮತ ಎನ್ನುತ್ತಾರೆ. ದ್ರು ಅನ್ನೊ ಧಾತುವಿನಿಂದ ಧರ್ಮ ಬಂದಿದೆ. ಅಂದರೆ ಎಲ್ಲರನ್ನೂ ಒಳಗೊಂಡದ್ದು. ಯಾವುದು ಎಲ್ಲವನ್ನು ರಕ್ಷಿಸುತ್ತದೆಯೋ ಅದು ಧರ್ಮವೆಂದು ವ್ಯಾಸರು ಹೇಳಿದ್ದಾರೆ.

**2)ಪ್ರಶಸ್ತಿ ವಾಪ್ಸಿ ಚಳುವಳಿ ಮೋದಿ ವಿರೋಧಿ ಚಳುವಳಿ ಎಂಬ ಹೇಳಿಕೆಗಳಿಗೆ ನಿಮ್ಮ ಅಭಿಪ್ರಾಯ?**

ನಾನಿದನ್ನು ಒಪ್ಪುವುದಿಲ್ಲ. ಪ್ರಶಸ್ತಿ ವಾಪಸ್ಸು ಮಾಡಿರುವವರೆಲ್ಲ ಗಣ್ಯರು. ಕೇಂದ್ರ ಸರ್ಕಾರದ ಮೇಲೆ ನಂಬಿಕೆ ಉಳ್ಳವರು. ಸರ್ಕಾರ ಪ್ರಜಾಪ್ರಭುತ್ವದ ಮಾನ್ಯತೆ ಪಡೆದು ಆಯ್ಕೆಯಾಗಿದೆ. ಆದ್ದರಿಂದ ನಮ್ಮ ವಿರೋಧವೇನಿದ್ದರು ಅಸಹನೆ ಬಗ್ಗೆ, ಸರ್ಕಾರದ ಮೇಲೆ ಯಾವ ವಿರೋಧವೂ ಇಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿ ಯೊಬ್ಬರ ಅಭಿಪ್ರಾಯಕ್ಕೂ ಅವಕಾಶವಿದೆ. ಬುದ್ಧ ದೇವರು ಉಪದೇಶ ಮಾಡುವಾಗ 67 ತತ್ವಶಾಖೆಗಳಿದ್ದು, ಚರ್ಚೆಗೆ ಭಾಗಿಯಾಗಿ ಎಲ್ಲವೂ ತಂತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದವು. ಇದು ಸಹನೆಯ ಹಾದಿ. ಆದ್ದರಿಂದ ನಮ್ಮ ವಿರೋಧ ಅಸಹನೆಗೆ ಸರ್ಕಾರಕ್ಕಲ್ಲ.

**3)ಭಗವದ್ಗೀತೆಯ ಕೆಟ್ಟ ಅಂಶಗಳನ್ನು ಸುಡಬೇಕೆಂದಿದ್ದಿರಿ, ಆದರೆ ದೇಶದ ಪ್ರಧಾನಿಯವರು ಅಮೇರಿಕಾದ ಅಧ್ಯಕ್ಷರಿಗೆ ಭಗವದ್ಗೀತೆಯನ್ನು ನೀಡಿದ್ದರು.**

ಪ್ರಜಾಸತ್ತಾತ್ಮಕವಾಗಿ ಪ್ರಧಾನಿಗಳು ಆಯ್ಕೆಯಾಗಿದ್ದಾರೆ. ನನಗವರಲ್ಲಿ ಗೌರವವಿದೆ. ನಿಜವಾಗಿಯೂ ಅವರು ಭಗವದ್ಗೀತೆಯನ್ನು ಓದಿ, ನಾನು ಹೇಳಿದ ಅಂಶಗಳಿಗೆ ಮನಸ್ಸು ಕೊಟ್ಟಿದ್ದರೆ ಈ ಕೆಲಸವನ್ನು ಅವರು ಮಾಡುತ್ತಿರಲಿಲ್ಲ. ಭಗವದ್ಗೀತೆಯಲ್ಲಿ ಶೂದ್ರರು, ಮಹಿಳೆಯರು ಪಾಪಿಗಳು ಅಲ್ಲದೆ ಜಾತಿ-ಬೇಧ, ವರ್ಣಾಶ್ರಮ ಪದ್ಧತಿಗಳ ಬಗ್ಗೆ ಪ್ರಸ್ತಾಪವಿದೆ. ಈ ಕೆಟ್ಟ ಅಂಶಗಳಿರುವ ಭಾಗಗಳನ್ನು ಸುಡಬೇಕೆಂದಿದ್ದೆ. ಅದರಲ್ಲಿನ ಆಧ್ಯಾತ್ಮದ ಅಂಶಗಳನ್ನು ಒಪ್ಪುತ್ತೇನೆ. ಮನುಸ್ಮೃತಿ ಯಾವುದನ್ನು ಕಠೋರವಾಗಿ ಹೇಳಿತ್ತೊ ಅದನ್ನು ಭಗವದ್ಗೀತೆ ನಯವಾಗಿ ಹೇಳಿದೆಯಷ್ಟೆ. ಪ್ರಧಾನಿಯವರು ಇದೊಂದು ಮತೀಯ ಗ್ರಂಥವೆಂದು ಕೊಟ್ಟಿದ್ದರೆ ನನ್ನ ಅಭ್ಯಂತರವಿಲ್ಲ, ಆದರೆ ಇದು ಶ್ರೇಷ್ಠ ಗ್ರಂಥವೆಂದು ಕೊಟ್ಟಿದ್ದರೆ ಅದಕ್ಕೆ ನನ್ನ ವಿರೊಧವಿದೆ.

**4)ಮೋಹನ್ ಭಾಗವಾತ್‌ರವರ ಮೀಸಲಾತಿ ಮರುಪರಾಮರ್ಶೆ ಹೇಳಿಕೆ ಕುರಿತ ನಿಮ್ಮ ಅಭಿಪ್ರಾಯ?**

ನನ್ನ ಅಭಿಪ್ರಾಯದಲ್ಲಿ ಎಲ್ಲಿವರೆಗೆ ಜಾತಿವ್ಯವಸ್ಥೆ ಇರುತ್ತೊ ಅಲ್ಲಿವರೆಗೆ ಮೀಸಲಾತಿ ಇರಬೇಕು. ಜೊತೆಗೆ ಯಾವ ಜಾತಿ ಎಷ್ಟೆಷ್ಟು ಜನಸಂಖ್ಯೆಯನ್ನು ಹೊಂದಿರುತ್ತದೊ ಅದಕ್ಕೆ ಅನುಗುಣವಾಗಿ ಮೀಸಲಾತಿ ಕೊಡಬೇಕು. ಇದು ಪ್ರಜಾಪ್ರಭುತ್ವಕ್ಕೆ ಪೂರಕ.

**5) ಅಸಹಿಷ್ಣುತೆ ಕುರಿತ ಪ್ರಚಾರದಲ್ಲಿ ಈಗಿನ ಮಾಧ್ಯಮಗಳ ಪಾತ್ರ ಹೇಗಿದೆ?**

ಮಾಧ್ಯಮದವರು ಪ್ರಚಾರ ಸಂದರ್ಭದಲ್ಲಿ ಎಲ್ಲಿ ತಮ್ಮ ಸ್ಥಾನಮಾನಗಳನ್ನು ಕಳಕೊಳ್ಳುತ್ತೇವೆಂಬ ಉದ್ದೇಶದಿಂದ ಮಾತನಾಡುತ್ತಾರೆ. ಜನಸಾಮಾನ್ಯರ ಉದ್ಧಾರಕ್ಕಾಗಿ ಯಾರೂ ಮಾತನಾಡುವುದಿಲ್ಲ.

# ಪ್ರಾಧ್ಯಾಪಕರು ಮನ ಮುಟ್ಟುವಂತೆ ಸಂವಾದ ನಡೆಸಬೇಕು



ಚಿತ್ರದಲ್ಲಿ ಕೆಪಿಎ ಉಪ ನಿರ್ದೇಶಕಿ ಡಾ. ಧರಣಿದೇವಿ ಮಾಲಗತ್ತಿ, ಮೈಸೂರು ವಿವಿ ಕುಲಸಚಿವ ಪ್ರೊ. ಸಿ. ಬಸವರಾಜು. ಕೇಂದ್ರ ನಿರ್ದೇಶಕ ಪ್ರೊ. ಲಿಂಗರಾಜ ಗಾಂಧಿ

ಮೈಸೂರು, ಪ್ರಾಧ್ಯಾಪಕರಾದವರು ವಿದ್ಯಾರ್ಥಿಗಳಿಗೆ ಕೇವಲ ಮಾಹಿತಿಯನ್ನು ಮಾತ್ರ ಹೇಳುವುದಲ್ಲ. ಅವರೊಂದಿಗೆ ಮನಮುಟ್ಟುವಂತೆ ಸಂವಾದ ನಡೆಸುವುದೂ ಮುಖ್ಯ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕಿ ಡಾ. ಧರಣಿದೇವಿ ಮಾಲಗತ್ತಿ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಯುಜಿಸಿ ಮಾನವಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಸಹಾಯಕ ಪ್ರಾಧ್ಯಾಪಕರಿಗೆ ವ್ಯವಸ್ಥೆಗೊಳಿಸಿದ್ದ 108ನೆಯ ಅಭಿವಿನ್ಯಾಸ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಶಿಕ್ಷಕರ ವೃತ್ತಿಗೆ ಸಂವಹನ ಕಲೆ ಮುಖ್ಯವಾದುದು. ಮೌಖಿಕ ಭಾಷೆ, ಲಿಖಿತ ಭಾಷೆ, ಆಂಗಿಕ ಭಾಷೆಯ ಜತೆಗೆ ಸಂವಾದವೂ ಬೇಕು.

ಶೈಕ್ಷಣಿಕ ಕ್ಷೇತ್ರದಲ್ಲಿರುವವರು ಕಲಿಕೆ ಹಾಗೂ ಕಲಿಸುವಿಕೆಯ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿರಬೇಕು. ಕಲಿಯುವುದನ್ನು ನಿಲ್ಲಿಸಿದಾಗ ನಮ್ಮ ವ್ಯಕ್ತಿತ್ವ ನಶಿಸಲು ಶುರುವಾಗುತ್ತದೆ. ಜೀವನಪರ್ಯಂತ ಕಲಿಕೆಗೆ ಮೀಸಲಾಗಿರಬೇಕು. ಪ್ರತಿಕ್ಷಣ ಮೋಲಿಕೆಗೆ ಸಿಕ್ಕ ಅವಕಾಶವೆಂದು ತಿಳಿಯಬೇಕು. ಇದು ಅಧ್ಯಾಪಕರಿಗೆ ಮಾತ್ರಮೀಸಲ್ಲಿಲ್ಲ.

ಮೈಸೂರು ವಿವಿ ಕುಲಸಚಿವ ಪ್ರೊ. ಸಿ. ಬಸವರಾಜು ಮಾತನಾಡಿ, ಯುಜಿಸಿಗೆ ಅಗತ್ಯವಾದ ಶೈಕ್ಷಣಿಕ ಅರ್ಹತೆಯನ್ನು ಗಳಿಸುವುದು ಮಾತ್ರ ಅಧ್ಯಾಪಕರ ಕೆಲಸವಲ್ಲ. ಸಮಾಜ ಬಯಸುವ ಅರ್ಹತೆ ಗಳಿಸಬೇಕು. ಅಧ್ಯಾಪಕನ ವೃತ್ತಿ ಸೂಕ್ಷ್ಮವಾದುದು. ಅವರಿಗೆ ಅನೇಕ ಸವಾಲುಗಳಿವೆ. ಅಧ್ಯಾಪಕರ ಶಕ್ತಿ ಎಂದರೆ ಉತ್ತಮ ನಡತೆ. ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ಯುವ ತಲೆಮಾರು ಭವಿಷ್ಯಕಟ್ಟಿಕೊಳ್ಳಲು ನೆರವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆಪಿಎ ಉಪ ನಿರ್ದೇಶಕಿ ಡಾ. ಧರಣಿದೇವಿ ಮಾಲಗತ್ತಿ, ಮೈಸೂರು ವಿವಿ ಕುಲಸಚಿವ ಪ್ರೊ. ಸಿ. ಬಸವರಾಜು. ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ನಿರ್ದೇಶಕ ಪ್ರೊ. ಲಿಂಗರಾಜ ಗಾಂಧಿ ಉಪಸ್ಥಿತರಿದ್ದರು.

# 33 ದೇಶಗಳ 110 ಪತ್ರಿಕೆಗಳು



ಮೈಸೂರು, ಮಹಾರಾಜ ಕಾಲೇಜಿನ ಆವರಣದಲ್ಲಿ ಬುಧವಾರ ಇಂಗ್ಲಿಷ್ ಪತ್ರಿಕೆಗಳೇ ಎಲರ್ಲ ಆಕರ್ಷಣೆಯ ಕೇಂದ್ರವಾಗಿದ್ದವು. 33 ದೇಶಗಳ 110ಪತ್ರಿಕೆಗಳು ಪ್ರದರ್ಶನದಲ್ಲಿದ್ದವು. ವಿದೇಶಗಳಲ್ಲಿ ಪ್ರಕಟವಾಗುವ ಪತ್ರಿಕೆಗಳ ಪರಿಚಯ ಮಾಡಿಸುವ ಸಲುವಾಗಿ ಆಯೋಜಿಸಿದ್ದ ವಸ್ತುಪ್ರದರ್ಶನದಲ್ಲಿ ಇಂಗ್ಲಿಷ್ ಪತ್ರಿಕೆಗಳು ಅಲ್ಲಿನ ಜನಮಾನಸದ ತಿರುಳನ್ನು ಮೈಸೂರಿಗರಿಗೆ ಬಿಚ್ಚಿಟ್ಟವು. ಕಾಲೇಜಿನ ಇಂಗ್ಲಿಷ್ ಅಧ್ಯಯನ ವಿಭಾಗದಿಂದ ಏರ್ಪಡಿಸಿದ್ದ ಪತ್ರಿಕೆಗಳ ಪ್ರದರ್ಶನ ವಿದ್ಯಾರ್ಥಿಗಳಿಗಷ್ಟೇ ಅಲ್ಲದೇ ಪ್ರತಿಯೊಬ್ಬರ ಜ್ಞಾನಾರ್ಜನೆಗಷ್ಟೇ ಉಪಯುಕ್ತವಾಗಿದೆ. ಅಮೇರಿಕಾ, ಇಂಗ್ಲೆಂಡ್, ಕಜಕಿಸ್ತಾನ್, ಕೆನಡಾ, ಆಸ್ಟ್ರೇಲಿಯಾ ಮುಂತಾದ 33 ದೇಶಗಳ 110 ಪತ್ರಿಕೆಗಳಿದ್ದವು. ಪ್ರೊ. ಬಿದ್ದಂಡಬೋಪಯ್ಯ ಅವರ ಕೃಪೆಯಲ್ಲಿ 'ದಿ ವೀಕೆಂಡ್ ಆಸ್ಟ್ರೇಲಿಯನ್' ಪತ್ರಿಕೆ ಹೊರಬರುತ್ತಿದ್ದು, ಸುಮಾರು 50 ಪುಟಗಳನ್ನು ಹೊಂದಿದೆ. ಚೀನಾದ ಚೈನಿ ಡೈಲಿ 32 ಪುಟಗಳನ್ನು ಹೊಂದಿದ್ದು, 1 ಒಪಿನಿಯನ್, ಲಿಫಿಗಾರೋ ಡಾ.ಲ್ಯಾನ್ಸಿ ಡಿಸೋಜಾ ಅವರ ಕೃಪೆಯಲ್ಲಿ ಸಂಗ್ರಹವಾಗಿದೆ. ಪ್ರೊ. ಹೆಚ್.ಎಂ.ವಿ.ವಸಂತಮ್ಮ ಅವರ ಫ್ರಾಂಕ್‌ಫರ್ಟ್, ಜರ್ಮನ್‌ನ ದಿ ವೆಲ್‌ಬಿಲ್ಡ್ ಸಿಟಿ, ಹಾಂಗ್‌ಕಾಂಗ್‌ನ ದಿ ಜಪಾನ್ ಟೈಮ್ಸ್, ದಿ ಜೋರ್ಡನ್ ಟೈಮ್ಸ್, ಮಲೇಶಿಯಾ, ಸೌದಿ ಅರೇಬಿಯಾಮ, ಸ್ವೀಡನ್, ಥೈಲ್ಯಾಂಡ್, ಸಿಂಗಾಪೂರ್, ಯುಎಸ್‌ಎ, ಯುಕೆ, ನೇಪಾಳ್, ಮಾರಿಷಿಯಸ್‌ಗಳಲ್ಲಿ ಕೃಷಿ ಬಗ್ಗೆ ಚಿಂತನೆಗಳು ಹೆಚ್ಚು ಇದ್ದು, ಒಂದೊಂದು ಕಾಲಾವಧಿಯಲ್ಲಿ ಹೊರಬಂದಿರುವ ಪತ್ರಿಕೆಗಳ ಒಟ್ಟು ಸಂಗ್ರಹವನ್ನು ಪ್ರದರ್ಶನದಲ್ಲಿ ಕಾಣಬಹುದು.

